# ನಿಮ್ಮೊಡನೆ

## ಆ್ಯಸಿಡ್ ದಾಳಿ: ಬಿಗಿಗೊಳ್ಳಲಿ ಕಾನೂನು ಪಾಲನೆ ಸಾಂತ್ವನದೊಂದಿಗೆ ನ್ಯಾಯವೂ ದೊರೆಯಲಿ

ಆ್ಯಸಿಡ್ ದಾಳಿಯ ಬಹುತೇಕ ಘಟನೆಗಳಿಗೆ ಹೆಣ್ಣಿನ ಮೇಲೆ ಪ್ರಾಬಲ್ಯ ಸಾಧಿಸುವ ಗಂಡಿನ ಕೆಟ್ಟ ಮನಸ್ಥಿತಿ ಕಾರಣ. ಲಿಂಗ ತಾರತಮ್ಯದಿಂದ ಮನೆಗಳೂ ಶಾಲೆಗಳೂ ಹೊರತಾಗಿರುವಂತೆ ನೋಡಿಕೊಳ್ಳುವುದರಲ್ಲಿಯೇ ಅನೇಕ ಸಮಸ್ಯೆಗಳಿಗೆ ಉತ್ತರವಿದೆ.

ಆ್ಯಸಿಡ್ ದಾಳಿಗೊಳಗಾದ ಸಂತ್ರಸ್ತೆಯರಿಗೆ ಕೊಂಚ ನೆಮ್ಮದಿ ನೀಡುವ ನಿರ್ಣಯವನ್ನು ರಾಜ್ಯ ಸರ್ಕಾರ ಕೈಗೊಂಡಿದೆ. ಸಂತ್ರಸ್ತೆಯರಿಗೆ ನಿವೇಶನ ಒದಗಿಸುವುದರ ಜೊತೆಗೆ, ಮನೆ ನಿರ್ಮಾಣ ಅಥವಾ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ 5 ಲಕ್ಷ ರೂಪಾಯಿ ನೆರವು ನೀಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದ್ದಾರೆ. ಸಂತ್ರಸ್ತ ಹೆಣ್ಣುಮಕ್ಕಳ ಬಗೆಗಿನ ಸರ್ಕಾರದ ಮಾನವೀಯ ಸ್ಪಂದನ ಮೆಚ್ಚುವಂತಹದ್ದು. ಹೆಣ್ಣುಮಕ್ಕಳ ಮೇಲಿನ ಆ್ಯಸಿಡ್ ದಾಳಿಯ ಪ್ರಕರಣಗಳು ನಾಗರಿಕ ಸಮಾಜ ತಲೆತಗ್ಗಿಸುವ ಕೃತ್ಯಗಳು. ಇಂಥ ಅಮಾನವೀಯ ಘಟನೆಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ಈಗಿರುವ ಕಾನೂನುಗಳನ್ನು ಮತ್ತಷ್ಟು ಬಲಪಡಿಸುವುದಾಗಿಯೂ ಮುಖ್ಯಮಂತ್ರಿ ಹೇಳಿದ್ದಾರೆ.

ಆ್ಯಸಿಡ್ ದಾಳಿಯ ಕೃತ್ಯಗಳನ್ನು ಜಾಮೀನುರಹಿತ ಅಪರಾಧವಾಗಿ ಪರಿಗಣಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ. ಭಾರತೀಯ ದಂಡ ಸಂಹಿತೆ '326ಎ' ಪ್ರಕಾರ, ಆ್ಯಸಿಡ್ ದಾಳಿ ಮಾಡಿದ ವ್ಯಕ್ತಿಯನ್ನು 10 ವರ್ಷಗಳ ಜೈಲುಶಿಕ್ಷೆಗೆ ಒಳಪಡಿಸಬಹುದಾಗಿದೆ. ಅಪರಾಧದ ತೀವ್ರತೆಯನ್ನು ಆಧರಿಸಿ ಜೀವಾವಧಿ ಜೈಲು ಶಿಕ್ಷೆ ವಿಧಿಸಲೂ ಅವಕಾಶವಿದೆ. ಕಠಿಣ ಕಾನೂನುಗಳಿದ್ದರೂ ಆ್ಯಸಿಡ್ ದಾಳಿ ಪ್ರಕರಣಗಳು ಅಲ್ಲಲ್ಲಿ ನಡೆಯುತ್ತಲೇ ಇವೆ. ಎರಡು ತಿಂಗಳ ಅವಧಿಯಲ್ಲಿ ಬೆಂಗಳೂರಿನಲ್ಲಿ ಮೂರು ಪ್ರಕರಣಗಳು ನಡೆದಿವೆ. ಏಪ್ರಿಲ್ 28ರಂದು ಸುಂಕದಕಟ್ಟೆಯಲ್ಲಿ ತರುಣಿಯೊಬ್ಬಳ ಮೇಲೆ ಆ್ಯಸಿಡ್ ದಾಳಿ ನಡೆಸಲಾಗಿತ್ತು. ಜೂನ್ 10ರಂದು ಕುಮಾರಸ್ವಾಮಿ ಲೇಔಟ್‌ನಲ್ಲಿ ಮಹಿಳೆಯೊಬ್ಬರು ಆ್ಯಸಿಡ್ ದಾಳಿಗೆ ತುತ್ತಾಗಿದ್ದರೆ, ಮೇ 30ರಂದು ಕಬ್ಬನ್‌ಪೇಟೆಯ ಆಭರಣದ ಅಂಗಡಿಯೊಂದರ ಉದ್ಯೋಗಿಯೊಬ್ಬ ತನ್ನ ಪುರುಷ ಸಹೋದ್ಯೋಗಿಯ ಮೇಲೆ ಆ್ಯಸಿಡ್ ದಾಳಿ ನಡೆಸಿದ್ದಾನೆ.

ದೇಶದ ವಿವಿಧ ಭಾಗಗಳಲ್ಲಿ ಕೂಡ ಆ್ಯಸಿಡ್ ದಾಳಿಯ ಬರ್ಬರ ಕೃತ್ಯಗಳು ಆಗಾಗ ನಡೆಯುತ್ತಲೇ ಇವೆ. ವಿಶ್ವದಲ್ಲೇ ಅತಿ ಹೆಚ್ಚು ಆ್ಯಸಿಡ್ ದಾಳಿಯ ಪ್ರಕರಣಗಳು ಭಾರತದಿಂದ ವರದಿಯಾಗುತ್ತವೆ. 2013ರಲ್ಲಿ 116, 2014ರಲ್ಲಿ 225 ಪ್ರಕರಣಗಳು ವರದಿಯಾಗಿದ್ದವು. ನಂತರದ ವರ್ಷಗಳಲ್ಲಿ ಸರಾಸರಿ ಸುಮಾರು 300 ಪ್ರಕರಣಗಳು ಪ್ರತಿ ವರ್ಷ ದಾಖಲಾಗುತ್ತಿವೆ. ಕೊರೊನಾ ತೀವ್ರತೆಯ ಕಾರಣದಿಂದಾಗಿ 2020 ಮತ್ತು 2021ರಲ್ಲಿ ಪ್ರಕರಣಗಳ ಸಂಖ್ಯೆ ಕನಿಷ್ಠ ಪ್ರಮಾಣಕ್ಕಿಳಿದಿದೆ.

ದಾಖಲಾದ ಪ್ರಕರಣಗಳೊಂದಿಗೆ, ವರದಿಯಾಗದೆಯೇ ತೆರೆಮರೆಗೆ ಸರಿದುಬಿಡುವ ದುರಂತಗಳೂ ಸಾಕಷ್ಟು ಸಂಖ್ಯೆಯಲ್ಲಿ ಇರುತ್ತವೆ ಎನ್ನುವುದನ್ನು ಮರೆಯಬಾರದು. ಕಠಿಣ ಕಾನೂನುಗಳ ನಡುವೆಯೂ ಆ್ಯಸಿಡ್ ದಾಳಿಗಳು ನಡೆಯುತ್ತಿರುವುದು ಆತಂಕ ಹುಟ್ಟಿಸುವ ಸಂಗತಿ. ಮಾರಣಾಂತಿಕ ಆ್ಯಸಿಡ್ ಸುಲಭವಾಗಿ ದೊರೆಯುವುದು ಅಪರಾಧಗಳ ಸಂಖ್ಯೆ ಹೆಚ್ಚಲು ಪ್ರಮುಖ ಕಾರಣವಾಗಿದೆ. ಆ್ಯಸಿಡ್ ಕೊಳ್ಳುವ ವ್ಯಕ್ತಿಯ ಗುರುತಿನ ಚೀಟಿ ಕೇಳಿ, ವಿಳಾಸ ನಮೂದಿಸಿಕೊಳ್ಳಬೇಕು ಎನ್ನುವ ನಿಯಮವಿದೆ. ಆದರೆ, ಪೇಟೆಯಲ್ಲಿ ಆ್ಯಸಿಡ್ ಸೀಸೆಗಳನ್ನು ಯಾರು ಬೇಕಾದರೂ ಸುಲಭವಾಗಿ ಖರೀದಿಸುವ ಸ್ಥಿತಿಯಿದೆ. ವಾಣಿಜ್ಯ ಮತ್ತು ವೈಜ್ಞಾನಿಕ ಉದ್ದೇಶಗಳನ್ನು ಹೊರತುಪಡಿಸಿದಂತೆ ಆ್ಯಸಿಡ್ ಮಾರಾಟವನ್ನು ನಿಷೇಧಿಸಬೇಕು ಎನ್ನುವ ಚಿಂತನೆ ಕಾರ್ಯರೂಪಕ್ಕೆ ಬಂದಿಲ್ಲ. ಆ್ಯಸಿಡ್ ಮಾರಾಟಕ್ಕೆ ಬಿಗಿ ನಿಯಂತ್ರಣಗಳನ್ನು ಜಾರಿಗೊಳಿಸಿದರೆ ಅಪರಾಧಗಳ ಸಂಖ್ಯೆಯೂ ಗಣನೀಯವಾಗಿ ಕಡಿಮೆಯಾಗಬಹುದು.

ಬರ್ಬರ ಕೃತ್ಯಗಳು ನಡೆದಾಗ ಪ್ರಕರಣಗಳನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವಲ್ಲಿ ಪೊಲೀಸರದು ಪ್ರಮುಖ ಪಾತ್ರ. ಆದರೆ, ಅಪರಾಧಿಗೆ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳುವುದಕ್ಕಿಂತಲೂ ಸಂತ್ರಸ್ತರಿಗೆ ಚಿಕಿತ್ಸೆ ಮತ್ತು ಪರಿಹಾರ ಕೊಡಿಸುವುದರಲ್ಲಿ ಕೆಲವು ಪೊಲೀಸರು ಹೆಚ್ಚಿನ ಆಸಕ್ತಿ ವಹಿಸುತ್ತಾರೆ.

ಆ್ಯಸಿಡ್ ದಾಳಿಗೊಳಗಾದ ಸಂತ್ರಸ್ತೆಯರು ಜೀವನಪರ್ಯಂತ ಅನುಭವಿಸುವ ಸಂಕಟ ಊಹೆಗೆ ನಿಲುಕುವಂತಹದ್ದಲ್ಲ. ಸಾಮಾನ್ಯ ಸುಟ್ಟ ಗಾಯಗಳಿಗಿಂತಲೂ ಆ್ಯಸಿಡ್ ದಾಳಿಯಲ್ಲಿ ಚರ್ಮ ಹೆಚ್ಚು ಗಾಸಿಗೊಳ್ಳುತ್ತದೆ. ಸಂತ್ರಸ್ತರು ದೃಷ್ಟಿಯನ್ನು ಕಳೆದುಕೊಳ್ಳುವ ಸಾಧ್ಯತೆಯೂ ಇರುತ್ತದೆ; ಹಲವು ಶಸ್ತ್ರಚಿಕಿತ್ಸೆಗಳ ನಂತರವೂ ಮೊದಲಿನ ಸ್ಥಿತಿಗೆ ಮರಳುವುದು ಕಷ್ಟ. ಈ ದೈಹಿಕ ಯಾತನೆಗಳ ಜೊತೆಗೆ ಮಾನಸಿಕ ಒತ್ತಡವೂ ಜೊತೆಯಾಗಿ ಸಂತ್ರಸ್ತರ ಆತ್ಮವಿಶ್ವಾಸವೇ ನುಚ್ಚುನೂರಾಗುತ್ತದೆ. ಇಂಥವರ ಬೆಂಬಲಕ್ಕೆ ಸರ್ಕಾರದ ಜೊತೆಗೆ ಸಮಾಜವೂ ನಿಲ್ಲಬೇಕು.

ಆ್ಯಸಿಡ್ ದಾಳಿಯ ಬಹುತೇಕ ಘಟನೆಗಳಿಗೆ ಹೆಣ್ಣಿನ ಮೇಲೆ ಪ್ರಾಬಲ್ಯ ಸಾಧಿಸುವ ಗಂಡಿನ ಕೆಟ್ಟ ಮನಸ್ಥಿತಿ ಕಾರಣವಾಗಿರುತ್ತದೆ. ಇಂಥ ಮನಸ್ಥಿತಿ ರೂಪುಗೊಳ್ಳದಂತೆ ಮಕ್ಕಳನ್ನು ಬೆಳೆಸುವುದು ನಮ್ಮ ಕೈಯಲ್ಲೇ ಇದೆ. ಲಿಂಗ ತಾರತಮ್ಯದಿಂದ ಮನೆಗಳೂ ಶಾಲೆಗಳೂ ಹೊರತಾಗಿರುವಂತೆ ನೋಡಿಕೊಳ್ಳುವುದರಲ್ಲಿಯೇ ಅನೇಕ ಸಮಸ್ಯೆಗಳಿಗೆ ಉತ್ತರವಿದೆ.

■ ರಘುನಾಥ ಚ.ಹ.



ಈಶ್ವರ್